ಶ್ರೀ ಬಿ. ಹೆಚ್. ಯಂಕಾನಾಯಕ್.—ಮಾನ್ಯ ಅಧ್ಯಕ್ಷರೆ, ಅಲ್ಲಿ ಕಟ್ಟಡ ಇದೆ. ಎಲ್ಲ ಅನುಕೂಲಗಳು ಇವೆ. ಅಧಿಕಾರಿಗಳ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಯಾವ ತೊಂದರೆಯೂ ಇಲ್ಲ. ಅದೂ ಅಲ್ಲದೆ ನಂ. ೨ ಡಿವಿಜನ್ ಪ್ಯೂರ್ಲಿ ಹಡಗಲಿ, ಹರಪನಹಳ್ಳಿ ಮತ್ತು ಹಗರಿ ಬೊಮ್ಮನಹಳ್ಳಿ ತಾಲ್ಲೂಕಿಗೆ ಸೇರಿದ್ದು. ನೀವು ಆ ಡಿವಿಜನ್‌ನನ್ನು ಅಲ್ಲಿಗೆ ಶಿಫ್ಟ್ ಮಾಡುವುದರಿಂದ ಯಾವ ತೊಂದರೆಯೂ ಆಗುವುದಿಲ್ಲ. ಆದರೆ ಈ ಅಧಿಕಾರಿಗಳು ಹಳ್ಳಿಗೆ ಬರುವುದಕ್ಕೆ ಇಷ್ಟವಿಲ್ಲದೇ ಇರುವುದರಿಂದ ಈ ರೀತಿ ಮಾಡುತ್ತಿದ್ದಾರೆ ಅಲ್ಲಿ ಎಲ್ಲ ಸೌಕರ್ಯಗಳೂ ಇವೆ. ದಯವಿಟ್ಟು ಇದರ ಬಗ್ಗೆ ತಾವು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಎಸ್. ಎಂ. ಯಾಹ್ಯಾ.—ನಾನು ಈಗಾಗಲೇ ಉತ್ತರವನ್ನು ಹೇಳಿದ್ದೇನೆ.

ಅಧ್ಯಕ್ಷರು:—ಶ್ರೀಯುತ ಪುಟ್ಟುರವರೆ, ತಮ್ಮ ೨೮೪ (೪೮೮) ಪ್ರಶ್ನೆಯನ್ನು ಮುಂದಿನವಾರ ತೆಗೆದುಕೊಳ್ಳುತ್ತೇವೆ.

ರೇಷ್ಮೆ ಮೊಟ್ಟೆ ವಿತರಣೆ ಬಗ್ಗೆ

೨೯೬. ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರೈತರಿಗೆ ರೇಷ್ಮೆ ಬಿತ್ತನೆ ಮೊಟ್ಟೆ ಸಿಕ್ಕದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಉತ್ತಮ ತಳಿ ಮೊಟ್ಟೆಗಳನ್ನು ರೈತರಿಗೆ ಕಾಲಕ್ಕೆ ಸರಿಯಾಗಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡುವ ಏರ್ಪಾಡನ್ನು ಮಾಡಿದೆಯೆ ?

ಇ) ಕಾಳಸಂತೆಯಲ್ಲಿ ರೇಷ್ಮೆ ಗೂಡುಗಳನ್ನು ಮಾರುವ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ಇಲ್ಲ.

ಆ) ಮಾಡಿದೆ.

ಇ) ರೇಷ್ಮೆ ಕಾಯಿದೆ ಜಾರಿ ವಿಭಾಗದ ಅಧಿಕಾರಿಗಳು ಹಾಗೂ ಇಲಾಖೆಯ ಸಹಾಯಕ ನಿರ್ದೇಶಕರು ಕಾಳಸಂತೆಯಲ್ಲಿ ರೇಷ್ಮೆ ಬಿತ್ತನೆ ಗೂಡುಗಳು ಮಾರಾಟ ಮಾಡದ ರೀತಿ ಕ್ರಮ ಕೈಗೊಂಡಿದ್ದಾರೆ. ಮೈಸೂರು ಬಿತ್ತನೆ ವಲಯದಲ್ಲಿ ೮ ತಾಂತ್ರಿಕ ಸೇವಾ ಕೇಂದ್ರಗಳು ಮತ್ತು ೬೯ ವಲಯಗಳಿವೆ. ಪ್ರತಿ ಬಿತ್ತನೆ ಬೆಳೆಗಾರನಿಗೂ ರಹದಾರಿ ನೀಡಿ ಪಾಸ್ ಪುಸ್ತಕಗಳನ್ನು ಕೊಡಲಾಗಿದೆ. ಪ್ರತಿ ಬೆಳೆ ಇರುವ ಅವಧಿಯಲ್ಲಿ ವಿಸ್ತರಣಾಧಿಕಾರಿಗಳು ಹಾಗೂ ವಲಯಾಧಿಕಾರಿಗಳು ಬೆಳೆಯನ್ನು ವೀಕ್ಷಿಸಿ ಬೆಳೆಯ ಬಗ್ಗೆ ಟಿಪ್ಪಣಿಯನ್ನು ಪಾಸ್ ಪುಸ್ತಕದಲ್ಲಿ ಬರೆಯುತ್ತಾರೆ. ಬಿತ್ತನೆ ರೈತರಿಗೆ ರೇಷ್ಮೆ ಮೊಟ್ಟೆಗಳನ್ನು ತಾಂತ್ರಿಕ ಸೇವಾ ಕೇಂದ್ರ ಅಧಿಕಾರಿಗಳು/ವಲಯಾಧಿಕಾರಿಗಳ ಮೂಲಕ ಮಾತ್ರ ಹಂಚಲಾಗುತ್ತದೆ. ಹುಳುಸಾಕಾಣಿಗೆ ಮೊದಲು ಮತ್ತು ಬೆಳೆಯ ನಂತರ ಹುಳು ಸಾಕಾಣಿಕೆ ಮನೆಯನ್ನು ಇಲಾಖೆಯವರೇ ಶುದ್ಧೀಕರಿಸುತ್ತಾರೆ ಇದಲ್ಲದೆ ಬಿತ್ತನೆ ಗೂಡಿನ ವಿಲೇವಾರಿಯ ಬಗ್ಗೆ ಇಲಾಖಾ ಅಧಿಕಾರಿಗಳೇ ಉಸ್ತುವಾರಿ ವಹಿಸುವುದರಿಂದ ಕಾಳಸಂತೆಯಲ್ಲಿ ರೇಷ್ಮೆ ಬಿತ್ತನೆ ಗೂಡುಗಳ ಮಾರಾಟ ನಡೆಯುತಕ್ಕಂತ ಪ್ರಸಂಗಗಳು ಸಾಮಾನ್ಯವಾಗಿ ಬರುವುದಿಲ್ಲ.

Sri K. LAKKAPPA.—Sir, there are three points involved in this question. Time and again, we are requesting particularly from the Sericulture districts that good quality seeds be supplied to the farmers, but they are not available and in some places even sub-standard seeds are being sold in the markets. Therefore, I would urge upon the Government to take steps to ensure supply of quality seeds and also supply them well in time to the farmers because many a time it is not supplied at the proper time. Secondly, I would like to know from the Hon'ble

Minister whether any assessment has been made about the requirement of the seeds; whether any time bound programme is drawn to supply seeds and at the same time I am insisting upon the Hon'ble Minister whether the Government would take action to stop large scale black-marketing of seeds. Third, the farmers should be provided more bonus in view of the seed area in my constituency and also quality seeds and other things are supplimented so that the beneficiaaries are benefited. I would like to know whether Government would initiate steps in this direction ?

ಶ್ರೀ ಎಂ. ಎಸ್. ಆತ್ಮಾನಂದ್.—ಮೂಲಭೂತವಾಗಿ ರೇಷ್ಮೆ ಕೃಷಿಗೆ ಮೈಸೂರು ತಳಿ ಪ್ರದೇಶದೇ ಒಂದು ಉತ್ತಮ ಬುನಾದಿ ಹಾಗೆ, ಮೈಸೂರು ತಳಿ ಪ್ರದೇಶದಲ್ಲಿ ರೋಗರಹಿತ ಮೊಟ್ಟೆಗಳನ್ನು, ಉತ್ತಮ ಗುಣಮಟ್ಟದ ಮೊಟ್ಟೆಗಳನ್ನು ಒದಗಿಸುವುದಕ್ಕೆ ನಮ್ಮ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಹಾಗೂ ಮೊಟ್ಟೆಗಳನ್ನೂ ಕೂಡ ಸಕಾಲದಲ್ಲಿ ಈ ರೇಷ್ಮೆ ಬೆಳೆಗಾರರಿಗೆ ಒದಗಿಸಿಕೊಡಲು ಕಾರ್ಯಪ್ರವೃತ್ತರಾಗಿದ್ದಾರೆ. ಆದರೆ ಮಳೆಯ ಅಭಾವದಿಂದ ಇತ್ತೀಚೆಗೆ ಸ್ವಲ್ಪಮಟ್ಟಿಗೆ ಏರುಪೇರು ಆಗಿದೆ. ಇದನ್ನು ಸರಿದೂಗಿಸಿಕೊಂಡು ಕ್ಲುಪ್ತಕಾಲದಲ್ಲಿ ರೇಷ್ಮೆ ಬೆಳೆಗಾರರಿಗೆ ಉತ್ತಮ ಹಾಗೂ ರೋಗರಹಿತ ಮೊಟ್ಟೆಗಳನ್ನು ಒದಗಿಸುವುದರ ಜೊತೆಗೆ ಆಗಿದ್ದಾಗೆ ಅವರಿಗೆ ಬೇಕಾದ ಬೇಕಾದ ಸಲಹೆ ಸೂಚನೆಗಳನ್ನೂ ಕೂಡ ನಮ್ಮ ಅಧಿಕಾರಿಗಳು ಇಲಾಖೆಯ ವತಿಯಿಂದ ಕೊಡುತ್ತಿದ್ದಾರೆ. ಈಗ ಎಷ್ಟು ಕೊಡುತ್ತಿದ್ದಾರೆ ಇದಕ್ಕಿಂತಲೂ ಇನ್ನೂ ಹೆಚ್ಚು ಕೊಡುವಂತೆ ಆದೇಶ ನೀಡುತ್ತೇನೆ. ಇನ್ನೂ ಬೋನಸ್ ವಿಚಾರದಲ್ಲಿ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿ ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಸೂಚಿಸಿದ್ದಾರೆ, ಇದರ ಬಗ್ಗೆ ನಮ್ಮ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಬೋನಸ್‌ನ್ನು ಹೆಚ್ಚು ಕೊಡುವ ವಿಚಾರವನ್ನು ಪರಿಶೀಲಿಸುತ್ತೇವೆಂದು ಹೇಳಬಯಸುತ್ತೇನೆ.

SRI K. LAKKAPPA.—Bonus must be increased because this is a demand from the farmers. Recently the farmers of Tumkur District and Kunigal Taluk represented to me that in view of the seeds being sold at a exhorbitant rate the bonus should be increased a little bit.

ಶ್ರೀ ಎಂ. ಎಸ್. ಆತ್ಮಾನಂದ.—ಕಳೆದ ವರ್ಷ ಕೂಡ ಸುಮಾರು ಒಂದು ಕೋಟಿ ರೂಪಾಯಿ ಗಳನ್ನು ಇದಕ್ಕೋಸ್ಕರ ಖರ್ಚು ಮಾಡಿದೆ. ಪ್ರಸಕ್ತ ವರ್ಷದಲ್ಲಿ ಕೂಡ ಒಂದು ಕೋಟಿ ರೂಪಾಯಿ ಗಳನ್ನು ಈ ಬೋನಸ್ ಕೊಡುವುದಕ್ಕಾಗಿ ನಾವು ಒದಗಿಸಿಕೊಂಡಿದ್ದೇವೆ. ರೈತರು ಇದಕ್ಕೋಸ್ಕರ ಅಹವಾಲನ್ನು ಸಲ್ಲಿಸಿದ್ದಾರೆಂದು ಹೇಳಿದರು. ಅದನ್ನು ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ರೇಷ್ಮೆ ಮೊಟ್ಟೆ ಅಭಾವದ ಬಗ್ಗೆ ತಮ್ಮ ಮೂಲಕ ವಂಶಿಗಳಿಗೆ ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಇದು ಕೃತಕವಾಗಿ ಸೃಷ್ಟಿಯಾಗಿರತಕ್ಕ ಅಭಾವ. ಇದಕ್ಕೆ ಕಾರಣ, ರೇಷ್ಮೆ ಇಲಾಖೆಯ ಅಧಿಕಾರಿಗಳು. ಅಲ್ಲಿ ಕಾಳಸಂತೆ ಮಾತ್ರವಲ್ಲ ಆಗುತ್ತಿರುವುದು; ದೋಷಪೂರಿತವಾದ ಮೊಟ್ಟೆ ವ್ಯಾಪಾರವನ್ನು ಖಾಸಗಿ ವ್ಯಾಪಾರಗಾರರು ಮಾಡುತ್ತಿದ್ದಾರೆ. ಅದನ್ನು ಸರ್ಟಿಫೈ ಮಾಡುವವರು ರೇಷ್ಮೆ ಇಲಾಖೆಯ ಅಧಿಕಾರಿಗಳು. ಈ ದುರ್ವ್ಯವಹಾರ ನಡೆಯುತ್ತಿದೆ. ಇದರಿಂದಾಗಿ ಬೆಳೆಯೇ ಬರುತ್ತಿಲ್ಲ. ಇದು ಎಲ್ಲಾ ಜಿಲ್ಲೆಗಳಲ್ಲಿ ಇರತಕ್ಕ ಸಮಸ್ಯೆ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು, ಈ ಕೃತಕ ಅಭಾವವನ್ನು ತಪ್ಪಿಸಬೇಕು.

ಶ್ರೀ ಎಂ. ಎಸ್. ಆತ್ಮಾನಂದ —ಈಗ ಎಲ್. ಎಸ್. ಪಿ ಗಳ ಮೇಲೆ ನಮ್ಮ ನಿಯಂತ್ರಣ ಬೆಲೆ ಬಗ್ಗೆ ಇರುವುದಿಲ್ಲವೆಂದು ನಂಜುಂಡಸ್ವಾಮಿಯವರು ಹೇಳಿದ್ದಾರೆ.ಈ ಹಿಂದೆ ಒಂದು ಪರಿಪಾಠ ಇತ್ತು. ನಮ್ಮ ಇಲಾಖೆಯ ಅಧಿಕಾರಿಗಳು ಆಗಾಗ ಎಲ್. ಎಸ್. ಪಿ.ಯವರಲ್ಲಿ ಹೋಗಿ ಗುಣಮಟ್ಟದ ಬಗ್ಗೆ ಹಾಗೂ ವಿತರಣಾ ವ್ಯವಸ್ಥೆ ಬಗ್ಗೆ ಪರೀಕ್ಷಿಸುತ್ತಿದ್ದರು. ಈಗಾಗಲೇ ನಮ್ಮ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಿದ್ದೇನೆ. ಈ ಹಿಂದೆ ಏನು ಪರಿಪಾಠವಿತ್ತು, ಅದನ್ನು ಮುಂದುವರಿಸಬೇಕು, ಖಾಸಗಿ ಮೊಟ್ಟೆ ತಯಾರಿಸುವವರ ಮೇಲೆ ನಿಯಂತ್ರಣದ ಬಗ್ಗೆ ವಿತರಣಾ ವ್ಯವಸ್ಥೆ ಬಗ್ಗೆ ಆಗಾಗ್ಗೆ ಭೇಟಿ ಕೊಟ್ಟು ಪರೀಕ್ಷಿಸಿ ರೋಗರಹಿತ ಮೊಟ್ಟೆಗಳನ್ನು ಕೊಟ್ಟು ರೈತರಿಗೆ ಅನುಕೂಲವಾಗುವ ಹಾಗೆ ಕ್ರಮ ಕೈಕೊಳ್ಳಬೇಕೆಂದು ನಾನು ಈಗಾಗಲೆ ಆದೇಶ ನೀಡಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ—ಈ ಖಾಸಗಿ ಮೊಟ್ಟೆ ಒದಗಿಸತಕ್ಕವರ ಮೇಲೆ ಏನೂ ನಿಯಂತ್ರಣ ಹಾಕಿದರೂ ಅಲ್ಲಿ ನಡೆಯುತಕ್ಕಂಥ ದೋಷಗಳನ್ನು ತಪ್ಪಿಸುವುದು ಬಹಳ ಕಷ್ಟವಾಗಿದೇ ಆದಕ್ಕಾಗಿ ಸರ್ಕಾರದವರು ತಮ್ಮ ಬೀಜ ಕ್ಷೇತ್ರದಲ್ಲಿ ಹೆಚ್ಚು ವ್ಯವಸ್ಥೆ ಮಾಡಿ ಸರ್ಕಾರದ ಮೂಲಕವೆ, ಬೀಜಗಳನ್ನು ಒದಗಿಸುವುದು ಸೂಕ್ತವಲ್ಲವೇ ಎಂಬುದನ್ನು ಆದಷ್ಟು ಜಾಗ್ರತೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಂ. ಎಸ್. ಆತ್ಮಾನಂದ.—ಅದನ್ನು ಹಂತಹಂತವಾಗಿ ಮಾಡುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಸ್ವಲ್ಪಸ್ವಲ್ಪವಾಗಿ ಮಾಡತಕ್ಕ ಕೆಲಸ ಅಲ್ಲ. ಏಕೆಂದರೆ. ರೇಷ್ಮೆ ವ್ಯವಸಾಯಗಾರರಿಗೆ ಒಂದು ಸಾರಿ ದೋಷದ ಮೊಟ್ಟೆ ಸಿಕ್ಕಿದರೆ ಆ ವರ್ಷದ ಲಾಭವಲ್ಲ ಅಸಲು ಕೂಡ ಸಿಕ್ಕುವುದಿಲ್ಲ. ಶ್ರಮ ಪಟ್ಟದ್ದಕ್ಕೂ ಪ್ರಯೋಜನ ಇರುವುದಿಲ್ಲ. ಈ ತೊಂದರೆ ಇರುವುದರಿಂದ ಆದಷ್ಟು ಬೇಗ ಸರ್ಕಾರಿ ಕ್ಷೇತ್ರದಿಂದಲೇ ಬೀಜ ಒದಗಿಸತಕ್ಕ ವ್ಯವಸ್ಥೆ ಮಾಡುತ್ತೀರಾ ? ಇದಕ್ಕಾಗಿ ಸ್ವಲ್ಪ ಹಣ ಖರ್ಚು ಮಾಡಿದರೆ ಸಾಕು: ರೈತರಿಗೆ ಕೊಡತಕ್ಕ ಪ್ರೋತ್ಸಹ ಮುಖ್ಯವೇ ಹೊರತು ಬೇರೆ ಅಲ್ಲ ಇದಕ್ಕಾಗಿ ಹೆಚ್ಚು ಹಣ ಖರ್ಚು ಮಾಡತಕ್ಕ ಅಗತ್ಯವೂ ಇಲ್ಲ. ಆದ್ದರಿಂದ ಇದನ್ನು ಪೂರ್ಣವಾಗಿ ಪರಿಶೀಲಿಸಬೇಕೆಂದು ಕೇಳುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ.—ಈಗ ಮೊಟ್ಟೆಗಳ ಅವಶ್ಯಕತೆಯಲ್ಲಿ ನಾವು ಸುಮಾರು ೪೫ ಪರ್ಸೆಂಟ್ ಅನ್ನು ಸರ್ಕಾರದ ವತಿಯಿಂದ ಪೂರೈಸುತ್ತಿದ್ದೇವೆ. ಉಳಿದ ೫೫ ಪರ್ಸೆಂಟ್ ಮೊಟ್ಟೆಯನ್ನು ಒದಗಿಸತಕ್ಕ ಜವಾಬ್ದಾರಿ ಸೆಂಟ್ರಲ್ ಸಿಲ್ಕ್ ಬೋರ್ಡ್ ಮತ್ತು ಖಾಸಗಿ ಮೊಟ್ಟೆ ತಯಾರಕರ ಮೇಲೆ ಬಿದ್ದಿದೆ. ಮಾನ್ಯ ಹುಚ್ಚಮಾಸ್ತಿಗೌಡರು ಹೇಳಿದ ಹಾಗೆ ೫೫ ಪರ್ಸೆಂಟ್ ಮೊಟ್ಟೆಗಳನ್ನು ಉತ್ಪಾದಿಸುವ ಜವಾಬ್ದಾರಿ ನಮ್ಮ ಮೇಲೆ ಬರುತ್ತದೆ. ಅದನ್ನು ನಿರ್ವಹಿಸುವುದು ಕಷ್ಟ. ಆದರೂ ಕೂಡ ರಾಜ್ಯದ ರೈತರ ಹಿತದೃಷ್ಟಿಯಿಂದ ಮೊಟ್ಟೆ ಅಭಾವ ನೀಗಿಸಲು ಶೀಘ್ರವಾಗಿ ಕಾರ್ಯಕ್ರಮ ಹಾಕಿ ಕೊಳ್ಳುತ್ತೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬೀಜ ಕ್ಷೇತ್ರ ಇಡೀ ರಾಜ್ಯದಲ್ಲಿ ವ್ಯಾಪಕವಾಗಿಲ್ಲ. ಕೇವಲ ೨-೩ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಇದೆ. ಆ ಕ್ಷೇತ್ರದಲ್ಲಿ ರೈತರಿಗೆ ಸಲವತ್ತು ಹೆಚ್ಚಿಗೆ ಕೊಟ್ಟರೆ ಅಲ್ಲಿ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಿದೆ ಆದುದರಿಂದ ಅವರಿಗೆ ಬೇಕಾದ ನೀರು ಒದಗಿಸಿಕೊಡುವುದು ಗೊಬ್ಬರ ಒದಗಿಸುವುದು, ಚಂದ್ರಿಕೆ ಬಗೈರೆ ಸಾಮಾನುಗಳನ್ನು ಒದಗಿಸುವುದು—ಈ ಕಾರ್ಯಕ್ರಮ ತೆಗೆದ. ಕೊಂಡರೆ ಈ ತೊಂದರೆಯನ್ನು ಬೇಗ ನಿವಾರಣೆ ಮಾಡಬಹುದು. ಈ ದಿಸೆಯಲ್ಲಿ ಕಾರ್ಯಕ್ರಮ ಬೇಗ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಎಂ. ಎಸ್. ಆತ್ಮಾನಂದ.—ಆ ಸಲಹೆಯನ್ನು ನಾನು ಪರಿಶೀಲಿಸಿ ಕಾರ್ಯಗತ ಮಾಡುತ್ತೇನೆ. ಮಾನ್ಯ ತಾನೆ ಮಾನ್ಯ ಬೈರೇಗೌಡರ ಗಮನ ಸೆಳೆಯುವ ಸೂಚನೆಯಲ್ಲಿ ಈ ವಿಷಯ ಪ್ರಸ್ತಾಪವಾಗಿತ್ತು. ಇವರು ಹೇಳತಕ್ಕ ಸಲಹೆಗಳನ್ನು ನಾನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುತ್ತೇನೆ.

ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿಯ ಅಭಾವದ ಬಗ್ಗೆ

೫೫೯. ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲ್).—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಭಾವವನ್ನು ನೀಗಿಸಲು ಕೋಲಾರ ನಗರದ ಬಳಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲು ಡೀಸಲ್ ಜನರೇಟರೊಂದನ್ನು ಸ್ಥಾಪನೆ ಮಾಡಲು ಸರ್ಕಾರದವರ ಮುಂದೆ ಇದ್ದ ಯೋಜನೆಯನ್ನು ಇನ್ನು ಕಾರ್ಯಗತ ಮಾಡದಿರಲು ಕಾರಣವೇನು ?

ಆ) ಕೋಲಾರ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ಅಭಾವವನ್ನು ನೀಗಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು).—

ಅ) ೧೯೬೭ರ ಅವಧಿಯಲ್ಲಿ ಕೋಲಾರ, ಬೀದರ್, ಜಮಖಂಡಿ ಮತ್ತು ಇಂಡಿ ಸ್ಥಳಗಳಲ್ಲಿ ಡಿ.ಜಿ. ಸೆಟ್‌ಗಳನ್ನು ಸ್ಥಾಪಿಸಲು ಯೋಜನಾ ಆಯೋಗವು ಒಪ್ಪಿಗೆ ನೀಡಿತು. ಅದರಂತೆ ಕೆ.ಪಿ.ಸಿ.ಯು ಟೆಂಡರ್‌ಗಳನ್ನು ಕರೆಯಿತು. ಟೆಂಡರ್‌ಗಳ ಪರಿಶೀಲನೆಯ ನಂತರ ಅವುಗಳ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕೆ.ಪಿ.ಸಿ.ಯು ಕಳುಹಿಸಿ ಮತ್ತು ಈ ಸಂಬಂಧದಲ್ಲಿ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲು ಸಪ್ಲೈಯರ್ ಕ್ರೆಡಿಟ್ ಅಥವಾ ಡೆಫರ್ಡ್ ಪೇಮೆಂಟ್ ಸೌಲಭ್ಯವನ್ನು